# ಅಘೋರಮಣಿ ದೇವಿ

**ಅನುರಾಧಾ ವಸಂತಕುಮಾರ್**

ಶ್ರೀರಾಮಕೃಷ್ಣರ ದಿವ್ಯತೆಯ ಸಾನ್ನಿಧ್ಯದಲ್ಲಿ ಅರಳಿ ನಿಂತ ಆಧ್ಯಾತ್ಮಿಕ ಪುಷ್ಪಗಳಲ್ಲಿ ಅದ್ವಿತೀಯಳೂ, ಅಸಾಧಾರಣ ಉನ್ನತಿಗೆ ಏರಿದವಳೂ ಆದ ಅಘೋರಮಣಿ ದೇವಿ, 'ಗೋಪಾಲೇರ್ ಮಾ' (ಗೋಪಾಲನ ತಾಯಿ) ಎಂದೇ ರಾಮಕೃಷ್ಣ ಪರಂಪರೆಯಲ್ಲಿ ಖ್ಯಾತಳಾದವಳು. ಅವಳ ಜೀವನದ ವಿವರಗಳನ್ನು ಅರಿಯುವುದೇ ಒಂದು ಪೂಜೆಯಂತೆ. ಶ್ರೀಮಾತೆ, ಸ್ವಾಮೀಜಿ, ನಿವೇದಿತಾ ಇವರೆಲ್ಲ ಅವಳೊಂದಿಗೆ ನಿಕಟ ಸಂಪರ್ಕ ದಿಂದಿದ್ದರು. ಅವಳ ಜೀವನವನ್ನು ಇಲ್ಲಿ ಸರಳವಾಗಿ ನಿರೂಪಿಸಿರುವ ಲೇಖಕಿ, ಬೆಂಗಳೂರು ಶಾರದಾ ಮಠದ ಭಕ್ತರು.

ಅನಾದಿಕಾಲದಿಂದಲೂ ಭಗವಂತನನ್ನು ನಿರ್ಗುಣ-ನಿರಾಕಾರ ಮತ್ತು ಸಗುಣ-ಸಾಕಾರನೆಂದು ಪರಿಗಣಿಸಿದ್ದಾರೆ. ಆದರೆ ಅದರ ಅನುಭವವನ್ನು ಪಡೆದವರ ಸಂಖ್ಯೆಯನ್ನು ಬೆರಳಿನಲ್ಲಿ ಎಣಿಸಬಹುದು. ಭಗವಂತನನ್ನು ನಾವು ಬಾಹ್ಯವಸ್ತುಗಳಲ್ಲಿ ಹುಡುಕುತ್ತೇವೆ. ಅವನು ನಮ್ಮ ಹೃದಯಕಮಲದಲ್ಲಿ ನೆಲೆಸಿದ್ದಾನೆಂಬ ಭರವಸೆ ಮತ್ತು ನಂಬಿಕೆ ನಮಗೆ ಬಹಳ ಕಡಿಮೆ. ಆಧ್ಯಾತ್ಮಿಕ ಜೀವನ ನಡೆಸುತ್ತಿರುವ ಶ್ರೇಷ್ಠ ವ್ಯಕ್ತಿಗಳಿಗೆ ಈ ಪ್ರಪಂಚದಲ್ಲಿ ಕೆಟ್ಟದೆಂಬುದೇ ಇರುವುದಿಲ್ಲ. ಎಲ್ಲವೂ ಭಗವಂತನ ಆವಿರ್ಭಾವದಂತೆ ಕಾಣಿಸುತ್ತದೆ. ಸಗುಣರೂಪದಲ್ಲಿ ವಾತ್ಸಲ್ಯ ಭಾವದ ಮೂಲಕ ಗೋಪಾಲನನ್ನು (ದೇವರನ್ನು) ಸಾಕ್ಷಾತ್ಕಾರ ಮಾಡಿಕೊಂಡಿರುವುದಕ್ಕೆ ಒಂದು ಜಾಜ್ವಲ್ಯಮಾನವಾದ ಉದಾಹರಣೆಯಾಗಿದ್ದಾಳೆ, ಅಘೋರಮಣಿ ದೇವಿ.

ಕಲ್ಕತ್ತೆಯ ದಕ್ಷಿಣೇಶ್ವರದಿಂದ ಕೇವಲ ಮೂರು ಮೈಲಿ ದೂರದಲ್ಲಿರುವ ಕಾಮಾರಹಾಟಿಯಲ್ಲಿ, ೧೮೨೨ರಲ್ಲಿ ಅಘೋರಮಣಿ ಜನಿಸಿದಳು. ಅವಳು ಬಾಲವಿಧವೆ. ತನ್ನ ಗಂಡನ ಮನೆತನದ ಗುರುಗಳಿಂದ ಮಂತ್ರದೀಕ್ಷೆಯನ್ನು ಪಡೆದಳು. ಅವರು ಅವಳಿಗೆ ಗೋಪಾಲನ ಮಂತ್ರವನ್ನು ಅನುಗ್ರಹ ಮಾಡಿದರು. ತಂದೆ ಹಾಗೂ ತಾಯಿಯ ಮರಣಾನಂತರ ಕಾಮಾರಹಾಟಿಯಲ್ಲಿದ್ದ ಗೋವಿಂದನ ದೇವಸ್ಥಾನದಲ್ಲಿ ಒಂದು ಕೋಣೆಯನ್ನು ಮಾಡಿಕೊಂಡಳು. ದೇವಸ್ಥಾನದ ಮಾಲೀಕಳು ಒಬ್ಬಾಕೆ ಶ್ರೀಮಂತ ಮಹಿಳೆ; ಅಘೋರಮಣಿಯ ಆಪ್ತ ಸ್ನೇಹಿತೆಯಾಗಿದ್ದಳು ಮತ್ತು ಅವಳೂ ಆಧ್ಯಾತ್ಮಿಕ ಜೀವನದಲ್ಲಿ ಆಸಕ್ತಿಯನ್ನು ಹೊಂದಿದ್ದಳು. ಅಲ್ಲಿಂದ ಗಂಗಾನದಿಯ ಸುಂದರ ದೃಶ್ಯವನ್ನು ಕಂಡು ಆನಂದಿಸುತ್ತಿದ್ದಳು. ಶುದ್ಧವಾದ ಜೀವನವನ್ನು ನಡೆಸುತ್ತ ಧ್ಯಾನ, ಜಪ, ಪೂಜೆ ಮುಂತಾದ ಆಧ್ಯಾತ್ಮಿಕ ಸಾಧನೆಗಳನ್ನು ಮಾಡಿ, ಗೋಪಾಲನನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಪೂಜಿಸುತ್ತಿದ್ದಳು.

ಸ್ವತಂತ್ರ ಪ್ರಕೃತಿಯುಳ್ಳ ಅಘೋರಮಣಿ ತನ್ನಲ್ಲಿದ್ದ ಒಡವೆಗಳನ್ನು ಮಾರಿ, ಅದರ ಹಣದಿಂದ ಬಂದ ಬಡ್ಡಿಯಿಂದ ಜೀವನ ನಡೆಸುತ್ತಿದ್ದಳು. ಭಗವಂತನ ಸಾಕ್ಷಾತ್ಕಾರಕ್ಕೆ ಏಕಾಗ್ರತೆ, ನಿಷ್ಠೆ, ಕ್ರಮಬದ್ಧವಾದ ಆಧ್ಯಾತ್ಮಿಕ ಸಾಧನೆ ಅತ್ಯಂತ ಮುಖ್ಯ. ಅಘೋರಮಣಿ ಇಂತಹ ಸಾಧನೆಯನ್ನು ಕೈಗೊಂಡಿದ್ದಳು. ಬೆಳಗಿನ ಜಾವ ೨ ಗಂಟೆಗೇ ಎದ್ದು, ಸ್ನಾನಾದಿಗಳನ್ನು ಮುಗಿಸಿ ಶುಭ್ರವಾದ



ನಂತರ ೮ ಗಂಟೆಯವರೆಗೆ ಜಪ ಮಾಡುತ್ತಿದ್ದಳು. ಅನಂತರ ರಾಧಾಕೃಷ್ಣ ದೇವರ ಪೂಜಾಪಾತ್ರೆಯನ್ನು ಶುಚಿಮಾಡಿ, ಹೂವಿನಿಂದ ಗೋಪಾಲನಿಗೆ ಹಾರ, ಗಂಧ ಮತ್ತು ನೈವೇದ್ಯಕ್ಕೆ ಅನ್ನ, ಬೇಳೆ ಮತ್ತು ಆಲೂಗಡ್ಡೆಯನ್ನು ಬೇಯಿಸಿ ಅರ್ಪಿಸುತ್ತಿದ್ದಳು. ಇದನ್ನೆಲ್ಲಾ ಪ್ರಸಾದವಾಗಿ ಸ್ವೀಕರಿಸಿ, ಸಂಜೆಯ ಹೊತ್ತು ಕೀರ್ತನೆ, ಭಜನೆ, ನಂತರ ಗೋಪಾಲನಿಗೆ ಸ್ವಲ್ಪ ಹಾಲು ಮತ್ತು ತೆಂಗಿನ ಕಾಯಿಯ ಉಂಡೆ ಸಮರ್ಪಿಸಿ, ಪ್ರಸಾದ ಸ್ವೀಕರಿಸಿ ಮಧ್ಯ ರಾತ್ರಿಯವರೆಗೆ ಜಪ ಮಾಡುತ್ತಿದ್ದಳು. ಈ ದಿನಚರಿಯನ್ನು ೧೮೫೨ ರಿಂದ ೧೮೮೩ ರವರೆಗೆ ೩೦ ವರ್ಷಗಳ ಕಾಲ ನಿರಂತರವಾಗಿ ನಡೆಸಿಕೊಂಡು ಬಂದಳು.

ಅಘೋರಮಣಿಯ ಸಾಧನೆಯ ಕಾಲದಲ್ಲಿ ನಡೆದ ಘಟನೆಯೊಂದನ್ನು ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಾದ ಸ್ವಾಮಿ ರಾಮಕೃಷ್ಣಾನಂದರು ವಿವರಿಸಿದ್ದಾರೆ: ಒಂದು ದಿನ ಗೋಪಾಲನಿಗೆ ನೈವೇದ್ಯ ಮಾಡಲು ಅಡಿಗೆ ಮಾಡಬೇಕಿತ್ತು. ಆದರೆ ಸೌದೆ ಹಸಿಯಾಗಿತ್ತು, ಜೊತೆಗೆ ಗಾಳಿ ಜೋರಾಗಿ ಬೀಸುತ್ತಿದ್ದು ಸೌದೆ ಸರಿಯಾಗಿ ಉರಿಯದೆ ಹೊಗೆ ತುಂಬಿಕೊಂಡು, ಇವಳ ಕಣ್ಣುಗಳನ್ನೂ ಆವರಿಸಿತು. ಹೇಗೋ ಅಡಿಗೆ ಮಾಡಿ ಮುಗಿಸಿದ ಮೇಲೆ ಅನ್ನ ಮತ್ತು ಪಲ್ಯವನ್ನು ಎಲೆಗೆ ಬಡಿಸುವ ಸಮಯದಲ್ಲಿ ಗಾಳಿಯಲ್ಲಿ ಎಲೆ ತೂರಿಹೋಯಿತು. ತನ್ನ ಶ್ರಮ ವ್ಯರ್ಥವಾಯಿತಲ್ಲಾ, ಗೋಪಾಲನಿಗೆ ನೈವೇದ್ಯ ಮಾಡಲಾಗಲಿಲ್ಲವಲ್ಲಾ ಎಂಬು ದುಃಖ ಅಘೋರಮಣಿಯನ್ನು ಆವರಿಸಿ, ಆಕೆ ಗೋಪಾಲನನ್ನು ಬಯ್ಯತೊಡಗಿದಳು. ಆಶ್ಚರ್ಯವೆಂದರೆ, ಒಬ್ಬ ಪುಟ್ಟ ಬಾಲಕ ಎಲೆಯನ್ನು ತಂದುಕೊಟ್ಟನು. ಅಘೋರಮಣಿ ಅನ್ನ ಮತ್ತು ತರಕಾರಿ ಪಲ್ಯವನ್ನು ಬಡಿಸುವವರೆಗೂ ಅವನು ಎಲೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು.

ಅಘೋರಮಣಿ ಸಂತೋಷದಿಂದ ಗೋಪಾಲನಿಗೆ ನೈವೇದ್ಯ ಮಾಡಿದಳು. ನಂತರ ಆ ಬಾಲಕ ಕಾಣಿಸಲಿಲ್ಲ. ಆ ಬಾಲಕನೇ ಬಾಲಗೋಪಾಲನೆಂದು ಅಘೋರಮಣಿಗೆ ಅರಿವಾಯಿತು. ಅಂದಿನಿಂದ ಹಗಲು ರಾತ್ರಿ ಊಟ, ನಿದ್ರೆಗಳನ್ನು ತೊರೆದು, 'ನನ್ನ ಗೋಪಾಲನೆಲ್ಲಿ, ನನ್ನ ಗೋಪಾಲನೆಲ್ಲಿ?' ಎನ್ನುತ್ತಾ ಹಂಬಲಿಸತೊಡಗಿದಳು. ಇವಳು ಹುಚ್ಚಿಯಾದಳೆಂದು ಜನರು ಭಾವಿಸಿದರು.*

೧೯ನೇ ಶತಮಾನದ ಮಧ್ಯಭಾಗದಲ್ಲಿ ರಾಣಿ ರಾಸಮಣಿಯಿಂದ ದಕ್ಷಿಣೇಶ್ವರದಲ್ಲಿ ನಿರ್ಮಿತವಾದ ಕಾಳೀಮಂದಿರದಲ್ಲಿ ಶ್ರೀರಾಮಕೃಷ್ಣರು ಸಾಧನೆಯನ್ನೆಲ್ಲಾ ಮುಗಿಸಿ ಶಿಷ್ಯರಿಗಾಗಿ ಎದುರು ನೋಡುತ್ತಿದ್ದ ಸಮಯದಲ್ಲಿ ಅಘೋರಮಣಿ ಶ್ರೀರಾಮಕೃಷ್ಣರನ್ನು ಭೇಟಿ ಮಾಡಿದಳು. ಶ್ರೀರಾಮಕೃಷ್ಣರು ಕಾಳೀಮಾತೆಯನ್ನು ಪೂಜಿಸಿ ಅವಳಿಗೆ ಸ್ವತಃ ಊಟ ಮಾಡಿಸುತ್ತಿದ್ದರು, ಗಾಳಿ ಬೀಸುತ್ತಿದ್ದರು, ತಾವು ತಿಂದು ರುಚಿ ನೋಡಿ ಭಗವತಿಗೆ ಅರ್ಪಿಸುತ್ತಿದ್ದರು. ಇದು ಕೇವಲ ಅವತಾರ ವ್ಯಕ್ತಿಗಳಿಗೆ ಮಾತ್ರ ಸಾಧ್ಯ.

ಅಘೋರಮಣಿ ಶ್ರೀರಾಮಕೃಷ್ಣರಿಗೆ ತಾನು ಕಂಡ ಗೋಪಾಲನ ಹಾವಭಾವ, ಅವನು ತನಗಿತ್ತ ವಿವಿಧ ರೂಪಗಳ ದರ್ಶನ, ಅವನು ಇವಳನ್ನು ಹಾಲು, ಬೆಣ್ಣೆ, ತಿಂಡಿ ಇವುಗಳಿಗಾಗಿ ಕಾಡಿ ಬೇಡಿದ ಬಗೆ ಮತ್ತು ಜಪ ಮಾಡುತ್ತಿದ್ದಾಗ ತೊಡೆಯ ಮೇಲೆ ಕುಳಿತು ಜಪಮಾಲೆಯನ್ನೇ ಕಸಿದುಕೊಳ್ಳುವ ಅವನ ಆಟಗಳನ್ನು ವಿವರಿಸಿದಳು. ಅಘೋರಮಣಿ ವಾತ್ಸಲ್ಯಭಾವದಿಂದ ಗೋಪಾಲನನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದಾಳೆಂದು ತಿಳಿದುಕೊಂಡು ಪರಮಹಂಸರು, ಬಹಳ ಸಂತೋಷಪಟ್ಟರು. ಶ್ರೀರಾಮಕೃಷ್ಣರನ್ನು ನೋಡುವುದಕ್ಕೆ ಹೋದಾಗಲೆಲ್ಲ ಅಘೋರಮಣಿಯು ಅಂಗಡಿಯಿಂದ ಸಂದೇಶವನ್ನು ತೆಗೆದುಕೊಂಡು ಹೋಗುತ್ತಿದ್ದಳು. ಶ್ರೀರಾಮಕೃಷ್ಣರು ಅವಳಿಗೆ, ''ಮನೆಯಲ್ಲಿ ಮಾಡಿದ ಪಲ್ಯ ತಂದರೆ ಸಾಕು, ಹಣವನ್ನು ವೆಚ್ಚ ಮಾಡಬೇಡ'' ಎಂದು ಹೇಳುತ್ತಿದ್ದರು.

ಒಮ್ಮೆ ಅಘೋರಮಣಿ ಶ್ರೀರಾಮಕೃಷ್ಣರನ್ನು ನೋಡಲು ಹೋದಾಗ ತನ್ನ ಪುಟ್ಟ ಗೋಪಾಲನು ಶ್ರೀರಾಮಕೃಷ್ಣರಲ್ಲಿ ಐಕ್ಯವಾಗುವುದನ್ನು ನೋಡಿದಳು ಮತ್ತು ಪುನಃ ತನ್ನ ಬಳಿಗೇ ಬರುವಂತೆ ಕಂಡಳು. ಇದರಿಂದ ಶ್ರೀರಾಮಕೃಷ್ಣರು ಬೇರೆಯಲ್ಲ, ತನ್ನ ಗೋಪಾಲ ಬೇರೆಯಲ್ಲ ಎಂಬುದನ್ನು ಆಕೆ ಅರಿತಳು. ಅಂದಿನಿಂದ ಶ್ರೀರಾಮಕೃಷ್ಣರು ಅಘೋರಮಣಿಯನ್ನು 'ಗೋಪಾಲೇರ್ ಮಾ', ಎಂದರೆ 'ಗೋಪಾಲನ ತಾಯಿ' ಎಂದು ಕರೆದರು. ಗೋಪಾಲ್ ಮಾ (ಆಕೆಯನ್ನು ಸಂಕ್ಷಿಪ್ತವಾಗಿ ಹೀಗೂ ಕರೆಯುತ್ತಿದ್ದರು) ಇಂತಹ ಶ್ರೇಷ್ಠ ಆಧ್ಯಾತ್ಮಿಕ ತಪಸ್ವಿನಿ ಪ್ರಾಪಂಚಿಕ ಸೋಂಕಿಗೆ ಸಿಲುಕದೆ, ಐಹಿಕ ಸಿರಿ ಸಂಪತ್ತಿಗಾಗಲಿ, ಸುಖ ಸೌಖ್ಯಗಳಿಗಾಗಲಿ ಲವಲೇಶವೂ ಮನಸ್ಸು ಕೊಡದೆ, ಕೇವಲ ಕೃಷ್ಣನ ಗುಂಗಿನಲ್ಲೇ, ಅವನ ಒಡನಾಟದಲ್ಲೇ ತನ್ನ ಜೀವನವನ್ನೆಲ್ಲ ಕಳೆದಳು.

ಈಕೆಯ ಜೀವನದಲ್ಲಿ ನಡೆದ ಮತ್ತೊಂದು ರೋಚಕವಾದ ಘಟನೆ ಎಂದರೆ, ಒಂದು ದಿನ ಮಧ್ಯಾಹ್ನದ ಸಮಯದಲ್ಲಿ ಧ್ಯಾನ ಮಾಡುತ್ತಿದ್ದಾಗ ಪರಮಹಂಸರು ತನ್ನ ತೊಡೆಯ ಮೇಲೆ ಕುಳಿತಂತೆ ಕಂಡಳು. ಕೆಲವು ಕ್ಷಣಗಳ ನಂತರ ಮತ್ತೆ ತನ್ನ ಇಷ್ಟದೇವತೆಯಾದ ಗೋಪಾಲನನ್ನು ಕಂಡಳು. ಮತ್ತೊಂದು ದಿನ, ಗೋಪಾಲ್ ಮಾ ಶ್ರೀಶಾರದಾದೇವಿಯವರು ಇದ್ದ ದಕ್ಷಿಣೇಶ್ವರದ ನಹಬತ್‌ನಲ್ಲಿ ಜಪ ಮಾಡುತ್ತಿದ್ದಾಗ ಶ್ರೀರಾಮಕೃಷ್ಣರು ಅಲ್ಲಿಗೆ ಬಂದು, ''ಇನ್ನು ಮುಂದೆ ನೀನು ಜಪ ಮಾಡುವ ಅಗತ್ಯವಿಲ್ಲ. ನೀನಾಗಲೇ ಬೇಕಾದಷ್ಟು ಪಡೆದಿರುವೆ. ಇನ್ನೂ ನೀನು ಗೋಪಾಲಭಾವದಲ್ಲಿದ್ದರೆ ನಿನ್ನ ದೇಹವನ್ನು ತ್ಯಾಗ ಮಾಡುವೆ'' ಎಂದರು.

ಶ್ರೀರಾಮಕೃಷ್ಣರ ಶ್ರೇಷ್ಠ ಭಕ್ತನಾದ ಬಲರಾಮ ಬಸು, ಬಾಗ್ ಬಜಾರ್‌ನಲ್ಲಿದ್ದ ತನ್ನ ಮನೆಯಲ್ಲಿ ಜಗನ್ನಾಥನ ರಥೋತ್ಸವವನ್ನು ಏರ್ಪಡಿಸಿದ್ದನು. ರಾಮಕೃಷ್ಣರೂ ಅಲ್ಲಿಗೆ ಆಗಮಿಸಿದ್ದರು. 'ಗೋಪಾಲ್ ಮಾ ಭಗವಂತನಲ್ಲೇ ತನ್ನ ಮನಸ್ಸನ್ನು ವಿಲೀನಗೊಳಿಸಿ ಆನಂದದಲ್ಲಿ ಉನ್ಮತ್ತಳಾಗುವ ಮತ್ತು ಗೋಪಾಲನನ್ನು ಸಾಕಾರ ರೂಪದಲ್ಲಿ ಕಂಡ ಶ್ರೇಷ್ಠ ಮಹಿಳೆ' ಎಂದು ರಾಮಕೃಷ್ಣರು ಶ್ಲಾಘಿಸಿದಾಗ ಬಲರಾಮ ಬಸು ಗೋಪಾಲ್ ಮಾಳನ್ನು ಕರೆತರಲು ಕಳುಹಿಸಿದನು. ಪರಮಹಂಸರು ಸಮಾಧಿಸ್ಥರಾಗಿ ಗೋಪಾಲನ ಭಾವದಿಂದ ಅಂಬೆಗಾಲನ್ನು ಇಡುತ್ತಾ ಬಾಲಗೋಪಾಲನಂತೆ ಗೋಪಾಲ್ ಮಾಳನ್ನು ಎದುರುನೋಡುತ್ತಿದ್ದರು. ಗೋಪಾಲ್ ಮಾ ತನ್ನ ಇಷ್ಟದೈವವಾದ ಗೋಪಾಲನನ್ನು ಶ್ರೀರಾಮಕೃಷ್ಣರಲ್ಲಿ ನೋಡಿ ಬಹಳ ಸಂತಸಗೊಂಡಳು. ಅಲ್ಲಿ ನೆರೆದಿದ್ದ ಭಕ್ತರೆಲ್ಲರೂ ಈ ದೈವೀ ದೃಶ್ಯವನ್ನು ನೋಡಿ ಬೆರಗಾದರು. ವಜ್ರದ ಗುಣವನ್ನು ವಜ್ರದ ವ್ಯಾಪಾರಿ ಮಾತ್ರ ತಿಳಿದುಕೊಳ್ಳಲು ಸಾಧ್ಯ. ಅಲ್ಪ ಮಾನವರಿಗೆ ಅದು ಅಸಾಧ್ಯ.

---

* ***They Lived with God*** by Swami Chetanananda, p.339 & 350

ಭಕ್ತರು ಪ್ರಾಪಂಚಿಕ ವಿಷಯಗಳಿಂದ ದೂರವಾಗಿರುವಂತೆ ಪರಮಹಂಸರು ಅವರನ್ನೆಲ್ಲಾ ಸದಾಕಾಲ ಗಮನದಲ್ಲಿಟ್ಟಿದ್ದರು. ಗೋಪಾಲ್ ಮಾ ಹೊರಟಾಗ ಬಲರಾಮ ಬಸು ಗೋಪಾಲ್ ಮಾಗೆ ಒಂದು ಸೀರೆ ಮತ್ತು ಅಡಿಗೆ ಮಾಡುವುದಕ್ಕೆ ಬೇಕಾದ ಕೆಲವು ವಸ್ತುಗಳನ್ನು ದೋಣಿಯಲ್ಲಿಟ್ಟರು. ದೋಣಿಯಲ್ಲಿ ಪರಮಹಂಸರು, ''ದೇವರನ್ನು ನಂಬಿರುವವರು ಪ್ರಾಪಂಚಿಕ ವಸ್ತುಗಳನ್ನು ನಿರಾಕರಿಸಬೇಕು. ಮೋಹಕ್ಕೆ ಒಳಗಾಗಬಾರದು. ಇದರಿಂದ ದೇವರ ಮೇಲೆ ಇಟ್ಟಿರುವ ನಂಬಿಕೆ ಮತ್ತು ಆಸರೆಗೆ ಭಂಗವಾಗುವುದು'' ಎಂದು ಹೇಳಿ, ಗೋಪಾಲ್ ಮಾ ಬಗ್ಗೆ ಸ್ವಲ್ಪ ತಾತ್ಸಾರ ಭಾವವನ್ನು ವ್ಯಕ್ತಪಡಿಸಿದರು. ಗೋಪಾಲ್ ಮಾ ನಹಬತ್‌ಖಾನೆಯಲ್ಲಿದ್ದ ಶ್ರೀಮಾತೆ ಶಾರದಾದೇವಿಯವರಿಗೆ ಬಲರಾಮನು ಕೊಟ್ಟ ವಸ್ತುಗಳನ್ನು ತೋರಿಸಿ, ಅವುಗಳನ್ನು ಯಾರಿಗಾದರೂ ಕೊಟ್ಟುಬಿಡುವುದಾಗಿ ಹೇಳಿದಳು. ಶ್ರೀಮಾತೆಯವರು ಅವಳಿಗೆ ಸಮಾಧಾನ ಮಾಡಿದರೂ, ಅವನ್ನೆಲ್ಲಾ ಇತರರಿಗೆ ದಾನ ಮಾಡಿದಳು. ತದನಂತರ ಪರಮಹಂಸರು ಗೋಪಾಲ್ ಮಾಳನ್ನು ಮೊದಲಿನಂತೆ ವಿಶ್ವಾಸದಿಂದ ಕಂಡರು.

ಒಂದು ದಿನ ಗೋಪಾಲ್ ಮಾ ಮತ್ತು ನರೇಂದ್ರನ (ಸ್ವಾಮಿ ವಿವೇಕಾನಂದರು) ಭೇಟಿ ದಕ್ಷಿಣೇಶ್ವರದಲ್ಲಿ ರಾಮಕೃಷ್ಣರ ಕೋಣೆಯಲ್ಲಿ ಆಯಿತು. ಪರಮಹಂಸರು ನರೇಂದ್ರನನ್ನು ಪರೀಕ್ಷಿಸಿ ಸ್ವಲ್ಪ ತಮಾಷೆಯನ್ನು ಮಾಡಲು ಮುಂದಾದರು. ಗೋಪಾಲ್ ಮಾಗೆ ಉಂಟಾದ ಆಧ್ಯಾತ್ಮಿಕ ಅನುಭವ ಮತ್ತು ಆಕೆ ಕಂಡ ಅಪೂರ್ವ ದೃಶ್ಯ, ಗೋಪಾಲಬಾಲನ ಒಡನಾಟ – ಎಲ್ಲಾ ವಿವರಗಳನ್ನೂ ನರೇಂದ್ರನಿಗೆ ವಿವರಿಸುವಂತೆ ಹೇಳಿದರು. ಗೋಪಾಲ್ ಮಾ ನರೇಂದ್ರನಿಗೆ ಎಲ್ಲವನ್ನೂ ಬಹಳ ಉನ್ಮತ್ತತೆಯಿಂದ, ಆನಂದ ಬಾಷ್ಪವನ್ನು ಸುರಿಸುತ್ತ, ತಾನು ಗೋಪಾಲನ ಅನುಗ್ರಹಕ್ಕೆ ಪಾತ್ರಳಾದ ವಿಷಯವನ್ನು ತಿಳಿಸಿದಳು. ನರೇಂದ್ರ ಸಾಕಾರವನ್ನು ಒಪ್ಪುತ್ತಿರಲಿಲ್ಲ, ನಿರಾಕಾರವನ್ನು ಮಾತ್ರ ಒಪ್ಪುತ್ತಿದ್ದ ನರೇಂದ್ರನಿಗೆ ಗೋಪಾಲ್ ಮಾ, ''ನೀನು ಅತಿ ಬುದ್ಧಿವಂತ, ಸೂಕ್ಷ್ಮಮತಿ, ಆಧುನಿಕ ವಿದ್ಯ ಮಾನಗಳನ್ನು ಬಲ್ಲ ನಿಪುಣ. ನಾನಾದರೋ ಬಡವಿ, ವಿದ್ಯೆಯ ಸೋಂಕೇ ಇಲ್ಲದವಳು. ನನಗೆ ಏನೂ ತಿಳಿಯದು. ನನಗೆ ಉಂಟಾದ ಅಪೂರ್ವ ದೃಶ್ಯವನ್ನು ನಂಬುತ್ತೀಯಾ ಮಗು?'' ಎಂದು ಅತಿ ಕಳಕಳಿಯಿಂದ ಹೇಳಿದಾಗ, ನರೇಂದ್ರ ಉನ್ಮತ್ತನಾಗಿ ಕಣ್ಣಿನಲ್ಲಿ ನೀರು ಸುರಿಸಿ, ''ತಾಯಿ, ನೀವು ನೋಡಿರುವುದೆಲ್ಲಾ ಸತ್ಯ, ಗೋಪಾಲನನ್ನು ಸಾಕಾರ ರೂಪದಲ್ಲಿ ಸಾಕ್ಷಾತ್ಕಾರ ಮಾಡಿಕೊಂಡಿದ್ದೀರಿ'' ಎಂದು ಅವಳನ್ನು ಸಮಾಧಾನಪಡಿಸಿದನು.

ಪರಮಹಂಸರ ನಿರ್ಯಾಣಾನಂತರ ಗೋಪಾಲ್ ಮಾ ದುಃಖತಪ್ತಳಾಗಿ ಹಲವಾರು ದಿನಗಳ ಕಾಲ ಏಕಾಂತದಲ್ಲಿ ಕಳೆದಳು. ಆಗ ಶ್ರೀರಾಮಕೃಷ್ಣರು ಇವಳಿಗೆ ದರ್ಶನ ನೀಡಿ ಸಮಾಧಾನಪಡಿಸಿದರು. ಒಂದು ಸಲ ಗಂಗಾನದಿಯ ಆಚೆಯ ದಡದಲ್ಲಿ ಮಹೇಶ ಎಂಬ ಊರಿಗೆ ಹೋದಳು. ಅಲ್ಲಿ ಜಗನ್ನಾಥನ ರಥದಲ್ಲಿ ಆಸೀನನಾಗಿರುವ ಜಗನ್ನಾಥನಲ್ಲಿ ತನ್ನ ಗೋಪಾಲನನ್ನು ಕಂಡು ಧನ್ಯಳಾದಳು. ಅಲ್ಲಿ ನೆರೆದಿದ್ದ ಭಕ್ತವೃಂದ ಜಗನ್ನಾಥನ ರಥವನ್ನು ಎಳೆಯುತ್ತಿರುವಾಗ ಅವರೆಲ್ಲರಲ್ಲಿಯೂ ಗೋಪಾಲನನ್ನು ಕಂಡು ತನ್ನನ್ನೇ ಮರೆತು ನಗುನಗುತ್ತಾ ಆನಂದದಿಂದ ನರ್ತಿಸುತ್ತಿರುವ ಗೋಪಾಲ್ ಮಾಳನ್ನು ಕಂಡ ಭಕ್ತರೆಲ್ಲರೂ ಆಗ ಮಂತ್ರಮುಗ್ಧರಾದರು.

೧೮೮೭ರಲ್ಲಿ ಬಲರಾಮಬಾಬುವಿನ ಮನೆಯಲ್ಲಿ ಗೋಪಾಲ್ ಮಾಳನ್ನು ಆಧ್ಯಾತ್ಮಿಕ ಅನುಭವಗಳ ವಿಷಯವಾಗಿ ಕೆಲವು ಭಕ್ತರು ಹಲವಾರು ಪ್ರಶ್ನೆಗಳನ್ನು ಕೇಳಿದಾಗ, ''ನಾನು ಓದು ಬರಹ ತಿಳಿಯದವಳು. ಯೋಗಿನ್, ತಾರಕ ಮತ್ತು ಶರತ್ (ರಾಮಕೃಷ್ಣರ ಶಿಷ್ಯರು) ಇವರನ್ನು ಕೇಳಿ'' ಎಂದಳು. ಭಕ್ತರು ಬಲವಂತಪಡಿಸಿದಾಗ, ''ನನ್ನ ಗೋಪಾಲನನ್ನು ಕೇಳುತ್ತೇನೆ'' ಎಂದು ಹೇಳಿ, ಆಧ್ಯಾತ್ಮಿಕ ವಿಷಯಕ್ಕೆ ಸಂಬಂಧಪಟ್ಟ ಅವರ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನು ನೀಡಿ ನೆರೆದಿದ್ದ ಭಕ್ತರನ್ನೆಲ್ಲಾ ಅವಾಕ್ಕುಗೊಳಿಸಿದಳು. ಬಾರಾನಗರ ಮಠದಲ್ಲಿ ರಾಮಕೃಷ್ಣರ ಶಿಷ್ಯರು ವಾಸಿಸುತ್ತಿದ್ದಾಗ ಗೋಪಾಲ್ ಮಾ ಮಠಕ್ಕೆ ಭೇಟಿ ನೀಡುತ್ತಿದ್ದಳು ಮತ್ತು ಶ್ರೀರಾಮಕೃಷ್ಣರಿಗೆ ಇಷ್ಟವಾದ ಪಲ್ಯ, ಸಿಹಿತಿಂಡಿಗಳನ್ನು ನೈವೇದ್ಯಕ್ಕೆ ಕೊಡುತ್ತಿದ್ದಳು.

ಸ್ವಾಮಿ ವಿವೇಕಾನಂದರು ಅಮೆರಿಕಾದಿಂದ ಭಾರತಕ್ಕೆ ಹಿಂದಿರುಗಿದ ನಂತರ, ನಿವೇದಿತಾ, ಓಲೇ ಬುಲ್, ಮತ್ತು ಜೋಸೆಫಿನ್ ಮ್ಯಾಕ್ಲಿಯಾಡ್ — ಈ ಮೂವರನ್ನೂ ಗೋಪಾಲ್‌ಮಾಳನ್ನು ಭೇಟಿಮಾಡಲು ಕಳುಹಿಸಿಕೊಟ್ಟರು. ಗೋಪಾಲ್ ಮಾ ಅವರನ್ನೆಲ್ಲಾ ಪ್ರೀತಿಯಿಂದ ಬರಮಾಡಿಕೊಂಡು ಅವರ ಕೆನ್ನೆ ಮುಟ್ಟಿ ಮುದ್ದಿಸಿ, ಸಿಹಿತಿಂಡಿಗಳನ್ನು ಹಂಚಿ ತನಗೆ ಉಂಟಾದ ಹಲವಾರು ಆಧ್ಯಾತ್ಮಿಕ ಅನುಭವಗಳನ್ನು ಅವರೊಂದಿಗೆ ಹಂಚಿಕೊಂಡಳು.

ಇಬ್ಬರು ಭಕ್ತೆಯರು ಸ್ವಾಮಿ ವಿವೇಕಾನಂದರನ್ನು ಮಂತ್ರದೀಕ್ಷೆಗಾಗಿ ಪ್ರಾರ್ಥಿಸಿಕೊಂಡಾಗ, ಸ್ವಾಮೀಜಿ ಅವರನ್ನು ಗೋಪಾಲ್ ಮಾ ಬಳಿಗೆ ಕಳುಹಿಸಿಕೊಟ್ಟರು. ಗೋಪಾಲ್ ಮಾ ತಾನು ಮಂತ್ರದೀಕ್ಷೆ ಕೊಡಲು ಅನರ್ಹಳೆಂದೂ ಅದರ ಬಗ್ಗೆ ತನಗೆ ಏನೂ ತಿಳಿಯದೆಂದೂ ಹೇಳಿದಳು. ಆಗ ಸ್ವಾಮೀಜಿ, ''ನೀನು ಗೋಪಾಲನನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದೀಯೆ. ನಿನ್ನ ಇಷ್ಟದೈವವಾದ ಗೋಪಾಲನ ಮಂತ್ರವನ್ನೇ ನೀಡು'' ಎಂದು ಪ್ರೋತ್ಸಾಹಿಸಿ ಆ ಭಕ್ತೆಯರನ್ನು ಮತ್ತೆ ಅವಳ ಬಳಿಗೆ ಕಳುಹಿಸಿಕೊಟ್ಟರು. ಸ್ವಾಮೀಜಿಯವರ ಆದೇಶದಂತೆ ಗೋಪಾಲೇರ್ ಮಾ ಆ ಭಕ್ತೆಯರಿಗೆ ಮಂತ್ರದೀಕ್ಷೆಯನ್ನು ಅನುಗ್ರಹಿಸಿದಳು. ಕೆಲವು ದಿನಗಳ ನಂತರ ಸ್ವಾಮಿ ವಿವೇಕಾನಂದರ ನಿರ್ಯಾಣದ ವಾರ್ತೆಯನ್ನು ಕೇಳಿ ಆಕೆ ತುಂಬಾ ನೊಂದು, ಬಹಳ ದುಃಖದಿಂದ ಕುಸಿದು ಬಿದ್ದಾಗ ಅವಳ ಮೊಳಕೈ ಪೆಟ್ಟಾಯಿತು.



ಗೋಪಾಲೇರ್ ಮಾ ಜೊತೆಗೆ ಸೋದರಿ ನಿವೇದಿತಾ

ಸ್ವಾಮೀಜಿಯವರ ಶಿಷ್ಯಳಾದ ಸೋದರಿ ನಿವೇದಿತಾ ಗೋಪಾಲ್ ಮಾಳತ್ತ ಆಕರ್ಷಿತಳಾದಳು. ನಿವೇದಿತಾಳನ್ನು ಗೋಪಾಲ್ ಮಾ ಅತ್ಯಂತ ಪ್ರೀತಿಯಿಂದ ಅವಳನ್ನು ತನ್ನ ಮಗಳಂತೆ ಕಂಡಳು. ೧೯೦೪ರಲ್ಲಿ ಗೋಪಾಲ್ ಮಾಳ ಆರೋಗ್ಯ ಕ್ಷೀಣಿಸಿದಾಗ ಅವಳನ್ನು ಬಲರಾಮ ಬಾಬುವಿನ ಮನೆಗೆ ಕರೆದುಕೊಂಡು ಹೋದರು. ಆದರೆ ನಿವೇದಿತಾ ಸ್ವತಃ ಮುಂದೆ ಬಂದು ಗೋಪಾಲ್ ಮಾಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಲು ಒಪ್ಪಿ, ಬಹಳ ಪ್ರೀತಿಯಿಂದ ಅವಳ ಸೇವೆ ಮಾಡಿದಳು. ಒಂದು ಪತ್ರದಲ್ಲಿ ನಿವೇದಿತಾ ಹೀಗೆ ಬರೆಯುತ್ತಾಳೆ:

''ಗೋಪಾಲ್‌ಮಾಳೊಂದಿಗೆ ಇದ್ದಾಗ ನಾನು ಪುಳಕಿತಳಾಗುವೆ. ಸಂತ ಎಲಿಜಬೆತ್ತಳ ಮಾತುಗಳು ನನ್ನ ಕಿವಿಯಲ್ಲಿ ಮೊಳಗುತ್ತವೆ. ನನ್ನ ದೇವನ ತಾಯಿ ನನ್ನನ್ನು ನೋಡಲು ಬಂದಿರುವಳು, ಅದೇನು ನನ್ನ ಭಾಗ್ಯ! ಗೋಪಾಲ್ ಮಾಳಲ್ಲಿ ಸಂತಳ ಗುಣ ಹೇಗಿರುವುದೆಂದರೆ ಅದು ಮುಕ್ತಾತ್ಮರಾದ ಪರಮಹಂಸರ ಸ್ಥಿತಿಯಷ್ಟೇ ಮಹತ್ತಾದುದು ಎಂದು ನನ್ನ ನಂಬಿಕೆ. ನಾನು ಅವಳನ್ನು ಸಾಕಾದಷ್ಟು ಉಪಾಸನೆ ಮಾಡಲು ಸಾಧ್ಯವಾದರೆ ಅವಳ ಕೃಪಾಶೀರ್ವಾದ ನಾನು ಪ್ರೀತಿಸುವ ಎಲ್ಲರ ಮೇಲೂ ಇಳಿದುಬರುವುದು. ಇದಕ್ಕಿಂತ ಹೆಚ್ಚು ಹೇಳಲು ಸಾಧ್ಯವೆ?''

ದಿನೇದಿನೇ ಗೋಪಾಲ್ ಮಾಳ ದೇಹಸ್ಥಿತಿ ಕುಂದಿದಾಗ ಜುಲೈ ೮, ೧೯೦೬ರಂದು ಅವಸಾನಕಾಲ ಪ್ರಾಪ್ತವಾಯಿತು. ಗಂಗಾನದಿಯ ತೀರದಲ್ಲಿ ತನ್ನ ದೇಹತ್ಯಾಗ ಮಾಡಬೇಕೆಂದು ಗೋಪಾಲ್ ಮಾ ನಿವೇದಿತಾಳನ್ನು ಕೇಳಿಕೊಂಡಳು. ನಿವೇದಿತಾ ಗೋಪಾಲ್ ಮಾಳ ದೇಹವನ್ನು ಪುಷ್ಪಗಳಿಂದ ಅಲಂಕರಿಸಿ ಗಂಗಾನದಿಯ ದಡಕ್ಕೆ ಕರೆದೊಯ್ದಳು. ಎರಡು ದಿನಗಳ ನಂತರ ಅವಳ ಪ್ರಾಣಪಕ್ಷಿ ಇಹಲೋಕವನ್ನು ತ್ಯಜಿಸಿ, ವಿಶ್ವವ್ಯಾಪಿಯಾಗಿ ಗೋಪಾಲನಲ್ಲಿ ಐಕ್ಯವಾಯಿತು.

ಭಗವಂತನ ಸಾಕ್ಷಾತ್ಕಾರಕ್ಕೆ ಜಾತಿಭೇದವಿಲ್ಲ, ಲಿಂಗಭೇದವಿಲ್ಲ. ನಿರಕ್ಷರಕುಕ್ಷಿಯಾಗಿದ್ದರೂ ಭಗವಂತನ ಕೃಪೆಗೆ ಪಾತ್ರರಾಗಬಹುದು. ಆದರೆ ನಮ್ಮಲ್ಲಿ ಅಂತಹ ಶ್ರದ್ಧೆ, ವ್ಯಾಕುಲತೆಗಳಿದ್ದು, ಕಾಮಕಾಂಚನದ ಸೋಂಕು ಲವಲೇಶವೂ ಇಲ್ಲದಿದ್ದರೆ ಮಾತ್ರ ಅವನ ಕೃಪೆಗೆ ಪಾತ್ರರಾಗಿ ಅವನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು ಎಂದು ಎಲ್ಲ ಭಕ್ತರಿಗೂ ಭರವಸೆ ಮತ್ತು ಆಶ್ವಾಸನೆ ನೀಡಿದ್ದಾಳೆ, ಅಘೋರಮಣಿ ದೇವಿ. ಅವಳನ್ನು ಯಾರಾದರೂ ಸಲಹೆ ಕೇಳಿದಾಗ, ''ನಿನ್ನಲ್ಲಿ ಇರುವ ಗೋಪಾಲನನ್ನು (ಭಗವಂತನನ್ನು) ಕೇಳು. ಅವನೇ ನಿನಗೆ ಸರಿಯಾಗಿ ದಾರಿ ದೀಪವಾಗುತ್ತಾನೆ. ವ್ಯಾಕುಲತೆಯಿಂದ ಅವನನ್ನು ಕರೆ. ನೀನು ಅವನನ್ನು ಮುಟ್ಟುವೆ'' ಎಂದು ಹೇಳುತ್ತಿದ್ದಳು.

ಇಂತಹ ನಾರೀಶಿರೋಮಣಿಯ ಜೀವನಶೈಲಿಯನ್ನು ಸ್ವಲ್ಪ ಮಟ್ಟಿಗಾದರೂ ನಾವು ನಮ್ಮಲ್ಲಿ ಅಳವಡಿಸಿಕೊಂಡು ಭಗವಂತನ ಕೃಪೆಗೆ ಪಾತ್ರರಾಗೋಣ. ಇದೇ ನಾವು ಅಘೋರಮಣಿಗೆ ಕೊಡುವ ಶ್ರದ್ಧಾಂಜಲಿ.

## ಸ್ವಾಮೀಜಿ ಹೃದಯವೈಶಾಲ್ಯ

ಸ್ವಾಮಿ ವಿವೇಕಾನಂದರು ಯಾವಾಗಲೂ ದುರ್ಬಲರಿಗೆ ಸಹಾಯ ಮಾಡುತ್ತಿದ್ದರು. ಒಮ್ಮೆ ಅವರು ಶ್ರೀರಾಮಕೃಷ್ಣರನ್ನು ಹಾಜರಾನಿಗಾಗಿ ಕಾಡಿದರು. ಆಗ ಗುರುಮಹಾರಾಜರು ಕಾಶೀಪುರದ ತೋಟದ ಮನೆಯಲ್ಲಿದ್ದರು. ಸ್ವಾಮೀಜಿ ಅವರನ್ನು ಬಿಡಲೇ ಇಲ್ಲ. ಅವರ ಅವಿಶ್ರಾಂತ ಪ್ರಾರ್ಥನೆ, 'ನೀವು ಅವನಿಗಾಗಿ ಏನನ್ನಾದರೂ ಮಾಡಲೇಬೇಕು. ಅವನನ್ನು ಆಶೀರ್ವದಿಸಬೇಕು' ಎಂಬುದಾಗಿತ್ತು. ಶ್ರೀರಾಮಕೃಷ್ಣರು 'ಅವನಿಗೀಗ ಏನೂ ದೊರಕದು. ಅವನು ಸಾಯುವ ಸಮಯದಲ್ಲಿ ಅವನಿಗೆ ದೊರಕುವುದು' ಎಂದರು. ಇದು ನಿಜವಾಗಿಯೂ ನಡೆಯಿತು. ಸ್ವಾಮಿ ವಿವೇಕಾನಂದರಿಗೆ ಕೃಪೆ ಮುಂತಾದ ವಿಷಯಗಳಲ್ಲಿ ತುಂಬಾ ನಂಬಿಕೆಯಿತ್ತು.

ಲಾಟು (ಸ್ವಾಮಿ ಅದ್ಭುತಾನಂದರು) ಬಹಳ ಬೇಗ ನಿದ್ರಿಸುತ್ತಿದ್ದ. ಒಮ್ಮೆ ಶ್ರೀರಾಮಕೃಷ್ಣರು ಇದಕ್ಕಾಗಿ ಕೋಪಗೊಂಡರು. ದಕ್ಷಿಣೇಶ್ವರದಿಂದ ಅವನನ್ನು ಕಳುಹಿಸಿಬಿಡಬೇಕೆಂದಿದ್ದರು. ಆದರೆ ಸ್ವಾಮಿ ವಿವೇಕಾನಂದರು ಮಧ್ಯೆ ಪ್ರವೇಶಿಸಿದ್ದರಿಂದ ಅದು ಶಾಂತಿಯಿಂದ ಮುಕ್ತಾಯವಾಯಿತು. ಈ ಕಾರಣದಿಂದ ಲಾಟು, ''ನಿಜವಾಗಿಯೂ ಗುರುಭಾಯಿ ಎಂದರೆ ಸ್ವಾಮಿ ವಿವೇಕಾನಂದರೊಬ್ಬರೆ'' ಎಂದು ಹೇಳುತ್ತಿದ್ದ.

*(ಸ್ವಾಮಿ ತುರೀಯಾನಂದರು, 'ಸಾಧಕನ ಕೈದೀವಿಗೆ' ಗ್ರಂಥದಲ್ಲಿ)*